# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 417 |
| ಸದಸ್ಯರ ಹೆಸರು | : | ಶ್ರೀಮತಿ ಉಮಾಶ್ರೀ<br>(ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 07.12.2023 |
| ಉತ್ತರಿಸುವ ಸಚಿವರು | : | ಗೃಹ ಸಚಿವರು |

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ 05 ವರ್ಷಗಳಲ್ಲಿ ದಾಖಲಾದ ರಸ್ತೆ ಅಪಘಾತ ಪ್ರಕರಣಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಪ್ರಕರಣಗಳ ಮಾಹಿತಿಯನ್ನು ನೀಡುವುದು) | **ಅನುಬಂಧ-1 ರಲ್ಲಿ ಒದಗಿಸಿದೆ.** |
| ಆ) | ರಾಜ್ಯದಲ್ಲಿ ರಸ್ತೆ ಅಪಘಾತಗಳನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | 1) ಸಂಚಾರ ನಿಯಮ ಉಲ್ಲಂಘಿಸುವ ವಾಹನ ಚಾಲಕರ ವಿರುದ್ಧ, ಸಂಪರ್ಕರಹಿತ ಹಾಗೂ ಸಂಪರ್ಕ ಸಹಿತ ನಿಯಮಗಳ ಜಾರಿಯಡಿಯಲ್ಲಿ ಪ್ರವರ್ತನ ಚಟುವಟಿಕೆಗಳ ಮೂಲಕ ನಿಯಮ ಉಲ್ಲಂಘನಾ ಪ್ರಕರಣಗಳನ್ನು ದಾಖಲು ಮಾಡಲು ಕ್ರಮಕೈಗೊಳ್ಳಲಾಗಿರುತ್ತದೆ.<br><br>2) ಹೆಚ್ಚು ಅಪಘಾತಗಳು ಸಂಭವಿಸುವ ಸ್ಥಳಗಳನ್ನು ಬ್ಲಾಕ್‌ಸ್ಪಾಟ್(ಕಪ್ಪು ಸ್ಥಳ)ಗಳೆಂದು ಗುರುತಿಸಲಾಗಿದ್ದು, ಇಂತಹ ಸ್ಥಳಗಳಲ್ಲಿ "ಅಪಘಾತ ವಲಯ" ಎಂಬ ನಾಮಫಲಕದ ಜೊತೆಗೆ "ಆಕ್ಸಿಡೆಂಟ್ ಪ್ರೋನ್ ಏರಿಯಾ" ಎಂಬ ಬೋರ್ಡ್ ಅನ್ನು ಅಳವಡಿಸಿರುವುದರಿಂದ ವಾಹನ ಚಾಲಕರಿಗೆ ಅರಿವು ಮೂಡಿಸುವ ಮೂಲಕ ರಸ್ತೆ ಅಪಘಾತಗಳ ನಿಯಂತ್ರಣಕ್ಕೆ ಕ್ರಮ ಕ್ರಮಕೈಗೊಂಡಿರುತ್ತದೆ.<br><br>3) ರಸ್ತೆಯಲ್ಲಿ ಎಲ್ಲೆಂದರಲ್ಲಿ ನಿಲುಗಡೆಯಾಗುತಿದ್ದ ವಾಹನಗಳನ್ನು ತೆರವುಗೊಳಿಸಿ, ವಾಹನಗಳು ಸುಗಮವಾಗಿ ಓಡಾಡಲು ಅನುವು ಮಾಡಿಕೊಡಲಾಗುತ್ತಿದೆ. ಈ ಮೂಲಕ ರಸ್ತೆ ಅಪಘಾತಗಳನ್ನು ಕಡಿಮೆ ಮಾಡಲು ಕ್ರಮಕೈಗೊಂಡಿದೆ.<br><br>4) ರಸ್ತೆ ಅಪಘಾತಗಳ ಬಗ್ಗೆ ರಾಜ್ಯದ ಜಿಲ್ಲಾ/ನಗರ ಸಂಚಾರ ಪೊಲೀಸ್ ವಿಭಾಗದ ಅಧಿಕಾರಿಗಳೊಂದಿಗೆ ಜಂಟಿಯಾಗಿ ತನಿಖೆ ನಡೆಸಲು, ಸಾರಿಗೆ ಅಧಿಕಾರಿಗಳು ಹಾಗೂ ಪಿ.ಡಬ್ಲ್ಯೂ.ಡಿ ಇಲಾಖೆ ಅಧಿಕಾರಿಗಳೊಂದಿಗೆ ಸ್ಥಳಕ್ಕೆ ಭೇಟಿ ನೀಡಿ, ವೈಜ್ಞಾನಿಕ ತನಿಖೆಯನ್ನು ಮಾಡಿ, ಅಪಘಾತಗಳಿಗೆ ವೈಜ್ಞಾನಿಕ ಕಾರಣಗಳನ್ನು ಕಂಡುಕೊಂಡು, ರಸ್ತೆ ಅಪಘಾತಗಳ ನಿಯಂತ್ರಣಕ್ಕೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ.<br><br>5) ವಾಹನಗಳ ವೇಗವನ್ನು ನಿಯಂತ್ರಿಸಲು ಅವಶ್ಯಕತೆ ಇರುವ ಕಡೆಗಳಲ್ಲಿ ವೈಜ್ಞಾನಿಕ ರಸ್ತೆ ಉಬ್ಬುಗಳನ್ನು ಸಂಬಂಧಪಟ್ಟ ಇಲಾಖೆಯ ಸಹಯೋಗದೊಂದಿಗೆ ನಿರ್ಮಿಸಲು ಕ್ರಮ ಕೈಗೊಳ್ಳಲಾಗಿದೆ. |

| | | |
|---|---|---|
| | | 6) ಬೆಂಗಳೂರು ನಗರ ಒಳಗೊಂಡಂತೆ ರಾಜ್ಯದ ನಗರ/ಜಿಲ್ಲೆಗಳಲ್ಲಿ ಪಾದಾಚಾರಿಗಳ ಸುರಕ್ಷತೆಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಹಾಗೂ ಜಿಲ್ಲಾ ನಗರಾಭಿವೃದ್ಧಿ ಇಲಾಖೆಗಳ ಸಹಯೊಗದೊಂದಿಗೆ ಹೊಸದಾಗಿ ಪಾದಚಾರಿ ರಸ್ತೆಗಳನ್ನು ನಿರ್ಮಿಸಿ, ಪಾದಚಾರಿ ರಸ್ತೆಗೆ ಗ್ರಿಲ್‌ಗಳನ್ನು ಅಳವಡಿಸಿ, ಸ್ಕೈವಾಕ್ ನಿರ್ಮಿಸಿ, ರಸ್ತೆ ಅಪಘಾತಗಳನ್ನು ಕಡಿಮೆ ಮಾಡಲು ಕ್ರಮ ಕೈಗೊಂಡಿರುತ್ತದೆ.<br><br>7) ರಸ್ತೆ ಅಪಘಾತಗಳು ಸಂಭವಿಸುವ ಹೆದ್ದಾರಿ ಹಾಗೂ ಇತರೆ ಪ್ರಮುಖ ರಸ್ತೆಗಳಲ್ಲಿ ರಸ್ತೆ ಅಪಘಾತಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಸೂಚನಾ ಫಲಕಗಳನ್ನು ಅಳವಡಿಸಲಾಗಿರುತ್ತದೆ.<br><br>8) ಜಿಲ್ಲಾ/ನಗರಗಳಲ್ಲಿ ಅಪಘಾತಗಳು ಸಂಭವಿಸುವ ಸ್ಥಳಗಳಲ್ಲಿ ಮತ್ತು ರಸ್ತೆ ಸುರಕ್ಷತೆಯ ಬಗ್ಗೆ ಮತ್ತು ಸುರಕ್ಷತೆ ಚಾಲನೆಯ ಬಗ್ಗೆ ವಾಹನ ಚಾಲಕರಿಗೆ ಮಾಹಿತಿ ಮತ್ತು ಅರಿವು ಮೂಡಿಸುವ ಸಲುವಾಗಿ ಸೂಚನಾ ಫಲಕಗಳನ್ನು ಅಳವಡಿಸುವ ಮೂಲಕ ರಸ್ತೆ ಅಪಘಾತಗಳ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಲಾಗಿದೆ.<br><br>9) ಎಲ್ಲಾ ಮಾದರಿಯ ವಾಹನಗಳ ಚಾಲಕರು/ ಸವಾರರಿಗೆ ಸಂಚಾರ ನಿಯಮಗಳು ಮತ್ತು ಅವುಗಳ ಪಾಲನೆಯ ಮಹತ್ವವನ್ನು ತಿಳಿಸಲು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ಆ ಮೂಲಕ ಸಂಚಾರ ನಿಯಮಗಳ ಬಗ್ಗೆ ಅರಿವು ಮೂಡಿಸಿ ರಸ್ತೆ ಅಪಘಾತಗಳನ್ನು ಕಡಿಮೆ ಮಾಡಲು ಕ್ರಮ ಕೈಗೊಳ್ಳಲಾಗಿದೆ.<br><br>10) ಶಾಲಾ / ಕಾಲೇಜು ಮಕ್ಕಳಿಗೆ ಸಂಚಾರ ನಿಯಮಗಳು, ಅವುಗಳ ಪಾಲನೆ/ಮಹತ್ವ ಹಾಗೂ ರಸ್ತೆ ಸುರಕ್ಷತೆಯ ಬಗ್ಗೆ ತಿಳುವಳಿಕೆ ನೀಡುವ ಕಾರ್ಯಕ್ರಮಗಳನ್ನು ನಿರಂತರವಾಗಿ ಹಮ್ಮಿಕೊಳ್ಳಲಾಗುತ್ತಿದ್ದು, ಆ ಮೂಲಕ ರಸ್ತೆ ಅಪಘಾತಗಳನ್ನು ತಡೆಗಟ್ಟಲು ಕ್ರಮ ಕೈಗೊಂಡಿರುತ್ತದೆ.<br><br>11) ಆಟೋಚಾಲಕರ ಸಂಘ & ಸರಕು ಸಾಗಣೆ ವಾಹನಗಳ ಚಾಲಕರ ಸಂಘ, ಖಾಸಗಿ ಕಂಪನಿ ವಾಹನಗಳ ಚಾಲಕರುಗಳನ್ನು ಹಾಗೂ ಬಿಎಂಟಿಸಿ ಬಸ್ ಡಿಪೋಗೆ ಭೇಟಿ ನೀಡಿ ಸಭೆ ನಡೆಸಿ ರಸ್ತೆ ಸುರಕ್ಷತೆಯ ಬಗ್ಗೆ ಅರಿವು ಮೂಡಿಸಿ ರಸ್ತೆ ಅಪಘಾತಗಳ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಲಾಗಿದೆ.<br><br>12) ಸಾರ್ವಜನಿಕರು ತಮ್ಮ ದಿನನಿತ್ಯದ ಓಡಾಟಕ್ಕೆ ಸಾರ್ವಜನಿಕ ಸಾರಿಗೆಗಳಾದ ಬಿ.ಎಂ.ಟಿ.ಸಿ, ಕೆ.ಎಸ್.ಆರ್.ಟಿ.ಸಿ ಬಸ್ಸುಗಳು, ಮೆಟ್ರೋರೈಲು, ರೈಲುಗಳನ್ನು ಹೆಚ್ಚಾಗಿ ಬಳಸುವಂತೆ ತಿಳುವಳಿಕೆ ಮೂಡಿಸುವ ಮತ್ತು ಪ್ರಚಾರಗಳನ್ನು ಕೈಗೊಂಡು, ವಾಹನ ದಟ್ಟಣೆಯನ್ನು ಕಡಿಮೆ ಮಾಡುವ ಮೂಲಕ ರಸ್ತೆ ಅಪಘಾತಗಳ ನಿಯಂತ್ರಣಕ್ಕಾಗಿ ಕ್ರಮ ಕೈಗೊಳ್ಳಲಾಗಿದೆ.<br><br>13) ಬಿ.ಎಂ.ಟಿ.ಸಿ / ಕೆ.ಎಸ್.ಆರ್.ಟಿ.ಸಿ ಬಸ್ ಚಾಲಕರಿಗೆ ಸಂಸ್ಥೆಯ ವಾಹನಗಳಿಂದ ವಾಹನ ಚಾಲಕರುಗಳಿಗೆ ರಸ್ತೆ ಅಪಘಾತಗಳ ನಿಯಂತ್ರಣದ ಕುರಿತು ಸಂಚಾರ ನಿಯಮಗಳ ಪಾಲನೆ/ಮಹತ್ವ ಮತ್ತು ರಸ್ತೆ ಸುರಕ್ಷತೆಯ ಕುರಿತು ತಿಳುವಳಿಕೆ ಮೂಡಿಸಲು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ. |

| | | |
|---|---|---|
| | | 14) ಅಪಘಾತಗಳ ನಿಯಂತ್ರಣಕ್ಕಾಗಿ ಮದ್ಯಪಾನ ಮಾಡಿ ವಾಹನ ಚಾಲನೆ, ಹೆಲ್ಮೆಟ್ ರಹಿತ ಚಾಲನೆ, ವಾಹನ ಚಲಾಯಿಸುವಾಗ ಮೊಬೈಲ್ ಬಳಕೆ, ಸೀಟ್ ಬೆಲ್ಟ್ ಧರಿಸದೇ ವಾಹನ ಚಾಲನೆ ಹಾಗೂ ಇನ್ನಿತರೆ ಸಂಚಾರ ಉಲ್ಲಂಘನೆಯ ಗುಣಾತ್ಮಕ ಪ್ರಕರಣಗಳನ್ನು ದಾಖಲಿಸುವ ಬಗ್ಗೆ ವಿಶೇಷ ಕಾರ್ಯಚರಣೆಯನ್ನು ಹಮ್ಮಿಕೊಳ್ಳುವ ಮೂಲಕ ರಸ್ತೆ ಅಪಘಾತಗಳನ್ನು ನಿಯಂತ್ರಣ ಮಾಡಲಾಗುತ್ತಿದೆ.<br><br>15) ಎಲೆಕ್ಟ್ರಾನಿಕ್ ಮಾಧ್ಯಮಗಳ ಮೂಲಕ ಸಂಚಾರ ನಿಯಮಗಳ ಪಾಲನೆಯ ಮಹತ್ವ ಮತ್ತು ರಸ್ತೆ ಸುರಕ್ಷತೆಯ ಕುರಿತು ಅರಿವನ್ನು ಮೂಡಿಸಿ, ರಸ್ತೆ ಅಪಘಾತಗಳ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಲಾಗಿದೆ.<br><br>16) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯ ಸಹಯೋಗದೊಂದಿಗೆ ಬೆಂಗಳೂರು ನಗರದ ವಿವಿಧ ಸ್ಥಳಗಳಲ್ಲಿ ಸೆಂಟರ್ ಮೀಡಿಯನ್‌ಗಳನ್ನು ನಿರ್ಮಿಸುವ ಮೂಲಕ ವಾಹನಗಳ ಸಂಘರ್ಷಣೆಯನ್ನು ನಿಯಂತ್ರಿಸಿ ರಸ್ತೆ ಅಪಘಾತಗಳನ್ನು ನಿಯಂತ್ರಿಸಲು ಕ್ರಮ ಕೈಗೊಳ್ಳಲಾಗಿದೆ.<br><br>17) ವಾಹನ ಚಾಲಕರಿಗೆ ಮತ್ತು ರಸ್ತೆ ಬಳಕೆದಾರರಿಗೆ ಶಿಸ್ತು ಪಥ ಚಾಲನೆಯ ಬಗ್ಗೆ ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಜಾಗೃತಿ ಮೂಡಿಸುವ ಮೂಲಕ ರಸ್ತೆ ಅಪಘಾತಗಳ ನಿಯಂತ್ರಣಕ್ಕೆ ಕ್ರಮ ಕೈಗೊಂಡಿರುತ್ತದೆ.<br><br>18) ಪ್ರಮುಖ ಜಂಕ್ಷನ್‌ಗಳಲ್ಲಿ ಟ್ರಾಫಿಕ್ ಸಿಗ್ನಲ್ ಲೈಟ್‌ಗಳನ್ನು ಅಳವಡಿಸಲಾಗಿದೆ ಮತ್ತು ಪಾದಚಾರಿಗಳು ಸುರಕ್ಷಿತವಾಗಿ ರಸ್ತೆ ದಾಟಲು ಝೀಬ್ರಾ ಕ್ರಾಸಿಂಗ್‌ಗೆ ಬಣ್ಣ ಬಳಿಯಲಾಗಿದೆ.<br><br>19) ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ ಮತ್ತು ಪ್ರಮುಖ ತಿರುವು ರಸ್ತೆಗಳಲ್ಲಿ ರಸ್ತೆ ಅಪಘಾತಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ರಸ್ತೆ ಪ್ರಾಧಿಕಾರ ರವರ ಸಹಯೋಗದೊಂದಿಗೆ ಹಾಗೂ ಇಲಾಖಾ ವತಿಯಿಂದ ಕ್ಯಾಟ್‌ಐಸ್ ಮತ್ತು ಬ್ಲಿಂಕರ್ಸ್‌ಗಳನ್ನು ಅಳವಡಿಸಿ ರಸ್ತೆ ಅಪಘಾತಗಳನ್ನು ತಡೆಗಟ್ಟಲು ಕ್ರಮ ಕೈಗೊಳ್ಳಲಾಗಿರುತ್ತದೆ.<br><br>20) ಅಪಾಯಕಾರಿ ರೀತಿಯಲ್ಲಿ ವ್ಹೀಲಿಂಗ್ ಮಾಡುವವರ ವಿರುದ್ಧ ಪ್ರಕರಣ ದಾಖಲಿಸಿ ಕ್ರಮ ಕೈಗೊಳ್ಳಲಾಗಿರುತ್ತದೆ. |
| ಇ) | ರಸ್ತೆ ಅಪಘಾತಗಳನ್ನು ತಡೆಗಟ್ಟಲು ಆಧುನಿಕ ತಂತ್ರಜ್ಞಾನಗಳನ್ನು ಅಳವಡಿಸಿ-ಕೊಳ್ಳಲಾಗಿದೆಯೇ; ಹಾಗಿದ್ದಲ್ಲಿ, ಯಾವ ಯಾವ ಹೊಸ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಲಾಗುತ್ತಿದೆ ? | 1. ಸಂಚಾರ ನಿಯಮ ಪಾಲನೆಯೂ ರಸ್ತೆ ಅಪಘಾತ ತಡೆಗಟ್ಟುವ ನಿಟ್ಟಿನಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದು, ಸಂಚಾರ ನಿಯಮ ಪಾಲನೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ಸಲುವಾಗಿ ಆಧುನಿಕ ತಂತ್ರಜ್ಞಾನದ ಪರಿಕರಗಳಾದ ಎ.ಎನ್.ಪಿ.ಆರ್. ಕ್ಯಾಮರಾ (ಆಟೋಮ್ಯಾಟಿಕ್ ನಂಬರ್‌ಪ್ಲೇಟ್ ರೆಕಗ್ನಿಷನ್), ಸರ್ವೇಲೆನ್ಸ್ ಕ್ಯಾಮರಾ, ಆರ್.ಎಲ್.ವಿ.ಡಿ (ರೆಡ್‌ಲೈಟ್ ವೈಲೇಷನ್ ಡಿಟೆಕ್ಷನ್) ಕ್ಯಾಮರಾ ಹಾಗೂ ಡಿಜಿ (ಡಿಜಿಟಲ್) ಟ್ಯಾಬ್ ಮುಖಾಂತರ ಸಂಚಾರ ನಿಯಮ ಉಲ್ಲಂಘನೆಗಳನ್ನು ದಾಖಲು ಮಾಡಲಾಗುತ್ತಿದೆ. ಇವುಗಳ ಮುಖೇನ, ಪ್ರತಿನಿತ್ಯ ಸಂಚಾರ ನಿಯಮ ಉಲ್ಲಂಘನೆಯ ಪ್ರಕರಣಗಳನ್ನು ದಾಖಲಿಸಲಾಗುತ್ತಿದೆ. |

| | | |
|---|---|---|
| | | 2.ಅತಿ ಹೆಚ್ಚು ರಸ್ತೆ ಅಪಘಾತಗಳು ಸಂಭವಿಸುವ ಸ್ಥಳಗಳನ್ನು ಬ್ಲಾಕ್‌ಸ್ಪಾಟ್ ಸ್ಥಳಗಳೆಂದು ಗುರುತಿಸಿ, ಸದರಿ ಸ್ಥಳಗಳಲ್ಲಿ ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಸುವ ಮೂಲಕ ರಸ್ತೆ ಅಪಘಾತಗಳಿಗೆ ಕಾರಣವಾಗುವ ಅಂಶಗಳನ್ನು ಕಂಡುಕೊಂಡು ಇತರ ಪೌರ ಸಂಸ್ಥೆಯ ಅಧಿಕಾರಿಗಳೊಂದಿಗೆ ಸಮನ್ವಯತೆ ಸಾಧಿಸಿ, ಅಪಘಾತಗಳನ್ನು ನಿಯಂತ್ರಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗಿದೆ.<br><br>3.ಅತಿವೇಗದ ಚಾಲನೆಯೂ ರಸ್ತೆ ಅಪಘಾತಗಳಿಗೆ ಪ್ರಮುಖ ಕಾರಣವಾಗಿದ್ದು, ಈ ಸಂಚಾರ ನಿಯಮ ಉಲ್ಲಂಘನೆಯ ವಿರುದ್ಧ ಕಠಿಣಕ್ರಮ ಕೈಗೊಳ್ಳಲು ಹೆದ್ದಾರಿಗಳಲ್ಲಿ ಸ್ಪೀಡ್ ರೆಡಾರ್ ಗನ್ ಗಳ ಮೂಲಕ ಹಾಗೂ ಪ್ರಮುಖ ಜಂಕ್ಷನ್‌ಗಳಲ್ಲಿ ಅಳವಡಿಸಿರುವ ಕ್ಯಾಮರಾಗಳನ್ನು ಬಳಸಿಕೊಳ್ಳುವ ಮೂಲಕ ಸಂಚಾರ ನಿಯಮ ಉಲ್ಲಂಘನೆಯ ಪ್ರಕರಣಗಳನ್ನು ದಾಖಲು ಮಾಡುವ ಮೂಲಕ ರಸ್ತೆ ಅಪಘಾತಗಳನ್ನು ನಿಯಂತ್ರಣ ಮಾಡಲು ಕ್ರಮ ಕೈಗೊಳ್ಳಲಾಗಿದೆ.<br><br>4.ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುವ ಚಾಲಕ/ಸವಾರರ ವಿರುದ್ಧ ಆಧುನಿಕ ತಂತ್ರಜ್ಞಾನದ ಪರಿಕರವಾದ ಬ್ರೆತ್ ಅನಲೈಸರ್‌ಗಳ ಮೂಲಕ ಚಾಲಕರು/ಸವಾರರು ಸೇವಿಸಿರುವ ಮದ್ಯಪಾನದ ಪ್ರಮಾಣವನ್ನು ಸ್ಥಳದಲ್ಲಿಯೇ ಖಚಿತ ಪಡಿಸಿಕೊಂಡು ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳನ್ನು ದಾಖಲು ಮಾಡುವಂತೆ ಕ್ರಮ ಕೈಗೊಳ್ಳಲಾಗಿರುತ್ತದೆ.<br><br>5.ಬೆಂಗಳೂರು ನಗರದಲ್ಲಿ ಸಾರ್ವಜನಿಕರೂ ಸಹ ಸಂಚಾರ ನಿಯಮ ಉಲ್ಲಂಘನೆಗಳನ್ನು ವರದಿ ಮಾಡಲು "ಪಬ್ಲಿಕ್-ಐ" ಮತ್ತು "ಐ-ಚೇಂಜ್ ಮೈಸಿಟಿ" ಆಪ್‌ಗಳನ್ನು ಪ್ರಸ್ತುತಪಡಿಸಿದ್ದು, ಛಾಯಚಿತ್ರಗಳನ್ನು ಪರಿಶೀಲಿಸಿ ಉಲ್ಲಂಘನೆಯು ಸ್ಪಷ್ಟವಾಗಿದ್ದಲ್ಲಿ ಉಲ್ಲಂಘನೆ ಮಾಡಿದ ವಾಹನದ ಮಾಲೀಕರಿಗೆ ಸೆಕ್ಷನ್-133 ಐ.ಎಂ.ವಿ ರೀತ್ಯಾ ನೋಟೀಸ್ ಜಾರಿ ಮಾಡಿ ದಂಡ ಪಾವತಿಸಿಕೊಳ್ಳಲಾಗುತ್ತಿದೆ.<br><br>6.ಬೆಂಗಳೂರು ನಗರ ಸಂಚಾರ ಪೊಲೀಸ್ ವಿಭಾಗವು ಸಾಮಾಜಿಕ ಜಾಲತಾಣದಲ್ಲಿ ಸಕ್ರಿಯವಾಗಿದ್ದು ಆಧುನಿಕ ತಂತ್ರಜ್ಞಾನದ ಪರಿಪೂರ್ಣ ಉಪಯೋಗವನ್ನು ಪಡೆದುಕೊಳ್ಳಲಾಗುತ್ತಿದೆ. ಫೇಸ್‌ಬುಕ್ ಹಾಗೂ"X" (ಟ್ವೀಟರ್) ಮಾಧ್ಯಮಗಳ ಮುಖೇನ ರಸ್ತೆ ಸುರಕ್ಷತೆ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.<br>7.ಕರ್ತವ್ಯ ನಿರತ ಸಂಚಾರಿ ಪೊಲೀಸರು ಬಾಡಿವೋರ್ನ್ ಕ್ಯಾಮರಾಗಳನ್ನು ಬಳಸುವ ಮೂಲಕ ಅಪಘಾತಗಳ ಸ್ಥಳದಲ್ಲಿ ತನಿಖೆ ನಡೆಸಲು ಸಹಾಯಕಾರಿಯಾಗಿರುತ್ತದೆ.<br>8.ಸಾರ್ವಜನಿಕರಲ್ಲಿ ರಸ್ತೆ ಸುರಕ್ಷತೆ ಬಗ್ಗೆ ತಿಳಿಸಲು, ಕಿರು ಚಿತ್ರಗಳನ್ನು ನಿರ್ಮಾಣ ಮಾಡಿ ಚಲನಚಿತ್ರ ಮಂದಿರಗಳಲ್ಲಿ ಹಾಗೂ ಸಾಮಾಜಿಕ ಜಾಲತಾಣದಲ್ಲಿ ತೋರಿಸಲಾಗುತ್ತಿದೆ. |

ಹೆಚ್‌ಡಿ 503 ಎಸ್‌ಎಸ್‌ಟಿ 2023

(ಡಾ: ಜಿ.ಪರಮೇಶ್ವರ)
ಗೃಹ ಸಚಿವರು

ಅನುಬಂಧ

| Sl. No. | Name of the Unit | Total Road Accident Cases | | | | |
|---|---|---|---|---|---|---|
| | | 2018 | 2019 | 2020 | 2021 | 2022 |
| 1 | Bangalore City | 4611 | 4684 | 3233 | 3213 | 3822 |
| 2 | Mysore City | 832 | 867 | 633 | 651 | 776 |
| 3 | Hubli Dwd City | 370 | 430 | 342 | 428 | 518 |
| 4 | Mangalore City | 1171 | 1028 | 692 | 797 | 927 |
| 5 | Belagavi City | 607 | 573 | 420 | 424 | 565 |
| 6 | Kalburgi City | 0 | 522 | 455 | 454 | 451 |
| 7 | Bangalore District | 2318 | 2271 | 1850 | 1743 | 2129 |
| 8 | Kolar | 691 | 684 | 551 | 549 | 741 |
| 9 | K.G.F. | 189 | 168 | 130 | 108 | 154 |
| 10 | Tumkur | 2265 | 2337 | 2127 | 2020 | 2257 |
| 11 | Ramanagara | 1702 | 1718 | 1251 | 1077 | 1410 |
| 12 | Chikkaballapura | 703 | 621 | 585 | 634 | 768 |
| 13 | Mysore district | 1472 | 1469 | 1365 | 1311 | 1599 |
| 14 | Mandya | 2189 | 2150 | 1739 | 1704 | 1978 |
| 15 | Hassan | 2157 | 2076 | 1772 | 1800 | 1975 |
| 16 | C'Nagar | 579 | 590 | 529 | 495 | 604 |
| 17 | Kodagu | 546 | 469 | 387 | 380 | 448 |
| 18 | D.K. | 908 | 920 | 654 | 751 | 943 |
| 19 | U.K. | 1177 | 1135 | 891 | 950 | 1053 |
| 20 | Chikmagalur | 902 | 884 | 765 | 818 | 985 |
| 21 | Udupi | 1271 | 1214 | 990 | 1010 | 1232 |
| 22 | Davanagere | 1149 | 1090 | 929 | 977 | 1053 |
| 23 | Chitradurga | 1485 | 1414 | 1484 | 1485 | 1722 |
| 24 | Shimoga | 1601 | 1542 | 1270 | 1275 | 1395 |
| 25 | Haveri | 803 | 739 | 660 | 753 | 835 |
| 26 | Belgaum | 1979 | 1895 | 1600 | 1697 | 1935 |
| 27 | Dharwad | 497 | 414 | 422 | 436 | 472 |
| 28 | Bijapur | 1012 | 907 | 851 | 896 | 918 |
| 29 | Bagalkot | 851 | 848 | 781 | 802 | 900 |
| 30 | Gadag | 371 | 344 | 336 | 291 | 329 |
| 31 | Bidar | 1264 | 1186 | 1069 | 1086 | 1136 |
| 32 | Gulbarga | 1287 | 815 | 839 | 762 | 852 |
| 33 | Yadgir | 431 | 412 | 405 | 414 | 420 |
| 34 | Raichur | 708 | 632 | 635 | 705 | 658 |
| 35 | Koppal | 608 | 587 | 527 | 600 | 653 |
| 36 | Bellary | 999 | 1009 | 1005 | 1150 | 528 |
| 37 | Vijayanagara | | | | | 616 |
| 38 | Railways | 2 | 14 | 4 | 1 | 5 |
| | **TOTAL** | **41707** | **40658** | **34178** | **34647** | **39762** |